INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 15 | ISSUE - 11 | DECEMBER – 2025

ಸರ್ವಜ್ಞನ ತ್ರಿಪದಿಗಳಲ್ಲಿ ಸಮಾಜಮುಖಿ ಚಿಂತನೆಗಳು

ಡಾ. ಶಿವಕೀರ್ತಿ ವಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಮಂಡ್ಯ..

ಸಾರಾಂಶ (Abstract) :



೧೬–೧೭ ನೇ ಶತಮಾನದ ಆಚೀಚೆ ನಿಲುಕುವ ವಚನಕಾರನಾದ ಸರ್ವಜ್ಞನೆಂಬ ಕವಿಯು ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದ ಹೆಸರನ್ನು ಪಡೆದಿರುತ್ತಾನೆ. ಮನುಜನ ಮೌಢ್ಯ, ನೈಪುಣ್ಯತೆ, ಜ್ಞಾನ, ಭಕ್ತಿ, ಶಿವಯೋಗ, ಕೃಷಿ, ವ್ಯಾಪಾರ, ದಾನ, ಸಾಲ, ಕಳ್ಳತನ, ದ್ವೇಷ, ವೈರತ್ವ, ಗುರುಮಹತ್ವ, ರಾಜನೀತಿ, ಸಜ್ಜನ– ದುರ್ಜನರ ಸ್ವಭಾವ, ಅನ್ನದ ಮಹತ್ವ, ನಾಡು–ನುಡಿ–ಕುಲದ ವಿಚಾರ, ಮಣ್ಣು, ಹೆಣ್ಣು, ಹೊನ್ನು, ವಿವಿಧ ಉದ್ಯೋಗಗಳು ಹೀಗೆ ಹಲವು ಕ್ಷೇತ್ರಗಳಲ್ಲಿನ ವಿಚಾರಧಾರೆಯನ್ನು ಜನಸಾಮಾನ್ಯರಿಗೆ ತಿಳಿಸುತ್ತಾ ಈ ಮೂಲಕ ಜೀವನ ಶಿಸ್ತನ್ನು ತನ್ನ ವಚನಗಳಲ್ಲಿ ಬೋಧಿಸುತ್ತಾನೆ. ಯಾವುದೇ ಭಾಷೆಯ ಸಾಹಿತ್ಯವೆಂಬುದು ಸಮಾಜಮುಖಿಯಾದುದು. ಆದುದರಿಂದ ಸಾಹಿತ್ಯದಲ್ಲಿನ ಕಾವ್ಯ, ವಚನ, ಕೀರ್ತನೆ ಮುಂತಾದ ಸೃಜನಶೀಲ ಪ್ರಕಾರಗಳು ಜನರನ್ನು ಕೇಂದ್ರವನ್ನಾಗಿಟ್ಟುಕೊಂಡು ಆಶಯವನ್ನು ವ್ಯಕ್ತಪಡಿಸುತ್ತವೆ. ಶಿವಶರಣರ ವಚನಗಳು, ದಾಸರ ಪದಗಳು ಬದುಕುವ ಕಲೆಯನ್ನು ಜನರಿಗೆ ಬೋಧಿಸುವಲ್ಲಿ ಯಶಸ್ವಿಯಾಗಿವೆ. ಜೊತೆಗೆ ಕನ್ನಡ ಸಾಹಿತ್ಯಕ್ಕೆ ವಿದ್ವತ್ ಶ್ರೀಮಂತಿಕೆಯನ್ನು ಈ ಮೂಲಕ ನೀಡಿವೆ. ಈ ಸಾಲಿನಲ್ಲಿ ಸರ್ವಜ್ಞನ ವಚನಗಳು ಮುಖ್ಯವಾದವು. ಸರ್ವಜ್ಞನ ವಿಚಾರಧಾರೆಯು ಸಮಾಜವನ್ನು ತಿದ್ದುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಮುಖ್ಯ ಪದಗಳು (Key Words) : ಇಹ, ಉರಗ ಭೂಷಣ, ಎರೆಯ, ಐಕ್ಯ, ದುರ್ಜನ, ಮಿಥ್ಯ, ಲೌಕಿಕ, ಸಜ್ಜನ, ಸುಡುವಗ್ನಿ, ಹರ.

ಸರ್ವಜ್ಞನು ತನ್ನ ಕ್ರಾಂತಿಕಾರಿ ನಿಲುವಿನಿಂದಾಗಿ ಸಾಹಿತ್ಯಧಾರೆಯನ್ನು ಜನಸಾಮಾನ್ಯರಿಗೆ ಮನಮುಟ್ಟುವಂತೆ ತಿಳಿಸಿದ್ದಾನೆ. ಗಂಭೀರವಾದ ವಿಷಯವನ್ನೂ ಸಹ ನವಿರಾಗಿ ತಿಳಿಹೇಳುತ್ತಾ ಕನ್ನಡದ ವಿಶ್ವಕೋಶದಂತಿರುವ ತ್ರಿಪದಿಗಳನ್ನು ಸೃಷ್ಟಿಸಿದನು. ಲೋಕಾನುಭವವೇ ತನಗೆ ಗುರುವೆಂದು ನಂಬಿ ಜನರನ್ನು ಉದ್ಧರಿಸಿದ ಸರ್ವಜ್ಞನು ನಾಡು ಕಂಡ ಸಮಾಜ ಸುಧಾರಕ ಎಂಬುದರಲ್ಲಿ ಸಂಶಯವಿಲ್ಲ. ಸರ್ವಜ್ಞನು ಅಲೆಮಾರಿ ಸ್ವಭಾವದವನಾಗಿದ್ದರಿಂದ ಒಂದು ಕಡೆ ನೆಲೆಸದೆ ಊರಿಂದ ಊರಿಗೆ ಸಾಗುತ್ತಾ, ತ್ರಿಪದಿಗಳ ರೂಪದಲ್ಲಿ ಸಮಾಜದ ಬಗೆಗಿನ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ ಹೆಸರಾದ ಜನಪದೀಯ ಕವಿಯಾಗಿದ್ದಾನೆ.

ಹಿರಿದು ಪಾಪವ ಮಾಡಿ ಹರಿವರು ಗಂಗೆಗೆ
ಹರಿವ ನೀರಲ್ಲಿ ಕರಗುವುದೆ ಆ ಪಾಪ
ಎರೆಯ ಮಣ್ಣಲ್ಲ ಸರ್ವಜ್ಞ॥

ಈ ಸಾಲುಗಳಲ್ಲಿ ಸರ್ವಜ್ಞನು ಮನುಷ್ಯರು ಮಾಡುವಂತಹ ಪಾಪ ಕಾರ್ಯಗಳನ್ನು ಕಳೆದುಕೊಳ್ಳುವ ಬೂಟಾಟಿಕೆಯ ಬಗೆಯನ್ನು ವ್ಯಂಗ್ಯವಾಗಿ ಹೇಳಿದ್ದಾರೆ. ಸಮಾಜದಲ್ಲಿನ ಜನರೆಲ್ಲರೂ ದುರ್ಜನರೆಂಬ ಭಾವನೆಯು ಸಲ್ಲದು. ಕೆಲವರು ಪಾಪಕರ್ಮಗಳನ್ನು ಮಾಡುವವರಾಗಿದ್ದು, ಅವರು ತಮ್ಮ ಪ್ರಾಯಶ್ಚಿತ್ತಕ್ಕಾಗಿ ಹರಿಯುವ ಗಂಗೆಯಲ್ಲಿ ಮುಳುಗಿ ಎದ್ದು ತಮ್ಮ ತಮ್ಮ ಪಾಪಗಳನ್ನು ನಿರ್ಮೂಲನೆ ಮಾಡಿಕೊಳ್ಳುವೆವೆಂಬ ಭ್ರಮೆಯಲ್ಲಿ ಬದುಕುತ್ತಿದ್ದಾರೆ. ದೇಹದ ಮೇಲೆ ಅಂಟಿದ ಮಣ್ಣು, ಕೊಳೆಯನ್ನು ಪರಿಶುದ್ಧ ನೀರಿನಲ್ಲಿ ಮುಳುಗಿ ತೊಳೆದುಕೊಳ್ಳಬಹುದೇ ಹೊರತು ಪಾಪ ಕರ್ಮಗಳನ್ನಲ್ಲ ಎಂಬುದನ್ನು ಮಾರ್ಮಿಕವಾಗಿ ತಿಳಿಸುತ್ತಾನೆ.

ಇದನ್ನು ಕುರಿತು ಸರ್ವಜ್ಞನು ಹೇಳುವುದೇನೆಂದರೆ ಸನಾತನ ಧರ್ಮದ ಪುರಾಣಗಳಲ್ಲಿ ತೀರ್ಥ ಸ್ನಾನಕ್ಕೆ ತುಂಬಾ ಮಹತ್ವದ ಸ್ಥಾನವಿದೆ. ಪಾಪ ಮಾಡಿದವರು ಗಂಗೆಯಲ್ಲಿ ಸ್ನಾನ ಮಾಡಿದರೆ ಪೂರ್ವಜನ್ಮದ ಪಾಪವು ಕಳೆಯುತ್ತದೆ ಎಂಬ ನಂಬಿಕೆಯನ್ನು ಶಾಸ್ತ್ರಗಳು ವ್ಯಕ್ತಪಡಿಸುತ್ತವೆ. ಆದರೆ ಸರ್ವಜ್ಞನು ಹೀಗೆ ಯಾವ ನದಿಯಲ್ಲಿಯೂ ಮುಳುಗೆದ್ದರೂ ಸಹ ಮಾಡಿದ ಪಾಪಗಳು ಕರಗುವುದಿಲ್ಲ. ಹಾಗೆ ಕರಗಲು ಅದು ಎರೆಯ ಮಣ್ಣಲ್ಲವೆಂದು ವಂಗ್ಯವಾಡುತ್ತಾನೆ.

ಹೆಣ್ಣಿನಿಂದಲಿ ಇಹವು ಹಣ್ಣಿನಿಂದಲಿ ಪರವು
ಹೆಣ್ಣಿನಿಂದಲೇ ಸಕಲಸಂಪದವು ಹೆಣ್ಣೊಲ್ಲ
ದಣ್ಣಗಳು ಎಲ್ಲಿ ಸರ್ವಜ್ಞ॥

ಮಗಳಕ್ಕ ತಂಗಿಯು ಮಿಗೆ ಸೊಸೆಯು ನಾದಿನಿಯು
ಜಗದ ವನಿತೆಯರು ಜನನಿಯೂ ಇವರೊಳಗೆ
ಜಗಕೊಬ್ಬಳೆಸೈ ಸರ್ವಜ್ಞ॥

ಸಾಂಸಾರಿಕ ಜೀವನದ ಆಳ–ಅರಿವನ್ನು ತಿಳಿದಿದ್ದ ಸರ್ವಜ್ಞ ಹೆಣ್ಣಿನ ಮಹತ್ವವನ್ನು ಸಾರಿದ್ದಾನೆ. ಮನುಜನ ಜೀವನದಲ್ಲಿ ಸ್ತ್ರೀಯು ತಾಯಿ, ಅಕ್ಕ, ತಂಗಿ, ಹೆಂಡತಿ ಮುಂತಾದ ರೂಪದಲ್ಲಿ ಪ್ರವೇಶಿಸುತ್ತಾಳೆ. ಈ ಮೂಲಕ ಗಂಡಿನ ಜೀವನ ರೂಪಗೊಳ್ಳುವುದಕ್ಕೆ, ಅವನ ಸಮರ್ಥ ಸೇವೆಯು ಲೋಕಕ್ಕೆ ಅರ್ಪಣೆಯಾಗುವುದಕ್ಕೆ ಕಾರಣೀಭೂತಳಾಗುತ್ತಾಳೆ. ಜ್ಯೋತಿಬಾ ಫುಲೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದ ದಿಟ್ಟ ಮಹಿಳೆ, ಗಾಂಧಿಜೀಯವರ ಸಹಧರ್ಮಿಣಿಯಾದ ಕಸ್ತೂರಿಬಾ ಅವರು ಬದುಕಿನ ಸರ್ವತ್ಯಾಗ ಮಾಡಿ ತನ್ನ ಪತಿಯೊಂದಿಗೆ ಸಮಾಜೋದ್ಧಾರಕ್ಕಾಗಿ ನಿಂತ ಸಂಗತಿಗಳು ಇತಿಹಾಸದಲ್ಲಿ ಅಜರಾಮರವಾಗಿವೆ. ಹೆಣ್ಣೆಂಬ ಜೀವವು ಮನೆಯ ಜೀವನಾಡಿ, ಹೆಣ್ಣನ್ನು ಗೌರವಿಸದ ಸಮಾಜವು ಸಾಂಸ್ಕೃತಿಕ ಶ್ರೀಮಂತಿಕೆ ಇಲ್ಲದೆ ಸೊರಗುತ್ತದೆ ಎಂಬುದು ಸರ್ವಜ್ಞನ ಅಭಿಪ್ರಾಯವಾಗಿದೆ.

ಪರಸ್ತ್ರೀಯ ಗಮನದಿಂ ನರಲೋಕ ಛೀ ಎನಲು
ಸಿರಿಯುಡಗಿ ತಲೆ ತೊಲಗಿದವು ರಾವಣನಿಗೆ
ಪರವಿನ್ನೆಲ್ಲಿ ಸರ್ವಜ್ಞ॥

ಪರಸ್ತ್ರೀ ವ್ಯಾಮೋಹದಿಂದಾಗಿ ಗೌರವವು ಹೇಗೆ ಮಣ್ಣುಪಾಲಾಗುತ್ತದೆಂಬುದನ್ನು ಈ ಮೇಲಿನ ವಚನದ ಸಾಲುಗಳಲ್ಲಿ ಕಾಣಬಹುದು. ಇದಕ್ಕೆ ನಿದರ್ಶನವಾಗಿ ಸರ್ವಜ್ಞನು ರಾಮಾಯಣ ಕಾವ್ಯದ ರಾವಣನ ವ್ಯಕ್ತಿತ್ವವನ್ನು ಉದಾಹರಿಸುತ್ತಾನೆ. ರಾವಣನು ಶ್ರೀರಾಮನ ಸತಿಯಾದ ಸೀತಾಮಾತೆಯನ್ನು ವನವಾಸದಲ್ಲಿದ್ದ ಸಂದರ್ಭದಲ್ಲಿ ಅಪಹರಿಸಿದ ಕಾರಣದಿಂದಾಗಿ ರಾವಣನು ಜನರಿಂದ ನಿಂದನೆಗೆ ಗುರಿಯಾದನು. ಪರಸ್ತ್ರೀ ವ್ಯಾಮೋಹಕ್ಕೆ ಬಲಿಯಾದ ರಾವಣನು ವಿನಾಶವನ್ನು ಹೊಂದುತ್ತಾನೆ. ರಾವಣನ ಸಾಮ್ರಾಜ್ಯವೂ ಸಹ ತನ್ನೆಲ್ಲಾ ವೈಭವವನ್ನು ಕಳೆದುಕೊಂಡು ನಾಶವನ್ನು ಹೊಂದಿತು. ಹೀಗೆ ಹೆಣ್ಣಿಂದ ಕೆಟ್ಟಂತಹ ದುರ್ಯೋಧನ, ದುಶ್ಯಾಸನ ಮುಂತಾದ ಕಾವ್ಯದ ಪಾತ್ರಗಳನ್ನು ಉದಾಹರಿಸಬಹುದು. ಅತ್ಯಂತ ಸಂಭಾವಿತನೂ, ಪರಾಕ್ರಮಿಯೂ ಆಗಿದ್ದ ಪ್ರಚಂಡ ರಾವಣನು ಪರಸ್ತ್ರೀ ವ್ಯಾಮೋಹದಿಂದ ತನ್ನ ಅಧಃಪತನವನ್ನು ಹೊಂದಿದನು. ಹೀಗಿರುವಾಗ ಸಾಮಾನ್ಯ ಮನುಜರ ಬದುಕು ಮೂರಾಬಟ್ಟೆಯಾಗುವುದಿಲ್ಲವೇ? ಹಾಗಾಗಿ ಪರಸ್ತ್ರೀಯನ್ನು ಕೆಟ್ಟ ದೃಷ್ಟಿಯಿಂದ ನೋಡುವ ಹೀನತನವನ್ನು ತ್ಯಜಿಸಬೇಕೆಂಬುದು ಸರ್ವಜ್ಞನ ನಿಲುವು.

ಅನ್ನ ದೇವರ ಮುಂದೆ । ಇನ್ನು ದೇವರು ಉಂಟೆ?
ಅನ್ನವಿರುವತನಕ ಪ್ರಾಣವು ಜಗದೊಳಗೆ
ಅನ್ನವೇ ದೈವ ಸರ್ವಜ್ಞ॥

ಮನುಷ್ಯನು ಎಷ್ಟೇ ಆಧುನಿಕನಾದರೂ ಆಹಾರವಿಲ್ಲದೆ ಜೀವಿಸಲಾರ. ಆದ್ದರಿಂದ ಮನುಜನು ತನ್ನ ನಿತ್ಯದ ಆಹಾರವಾಗಿ ಸ್ವೀಕರಿಸಿದ ಅನ್ನವು ದೇವರ ಸಮಾನವಾಗಿದೆ. ಅನ್ನವಿಲ್ಲದೇ ಬದುಕು ಸಾಧ್ಯವಿಲ್ಲ. ಜಗತ್ತಿನ ದೇವರು ಅನ್ನವೇ ಆಗಿದೆ ಎನ್ನುವದರೊಂದಿಗೆ ಸರ್ವಜ್ಞನು ತಾನು ಜೀವಿಸಿದ್ದ ಪ್ರದೇಶದ ಜನರ ಆಹಾರ ಪದ್ಧತಿಯ ಪರಿಚಯ ನೀಡುತ್ತಾನೆ. ಧನ, ಸಂಪತ್ತು ಮುಂತಾದವುಗಳ ಸಲುವಾಗಿ ಕಾದಾಡುವ ಮನುಷ್ಯನು ಅನ್ನದ ಬೆಲೆ ತಿಳಿದು ವರ್ತಿಸಬೇಕು. ಆಹಾರವನ್ನು ನಿಯಮಿತವಾಗಿ ಬಳಸಿ ಜಗವನ್ನು ಹಸಿವು ಮುಕ್ತಗೊಳಿಸಬೇಕೆಂಬುದು ಸರ್ವಜ್ಞನ ಅಭಿಮತವಾಗಿದೆ.

ಎರೆಯನ್ನು ಉಳುವಂಗೆ ದೊರೆಯನ್ನು ಪಿಡಿದಂಗೆ
ಉರಗ ಭೂಷಣನ ನೆನೆವಂಗೆ ಭಾಗ್ಯವು
ಅರಿದಲ್ಲವೆಂದು ಸರ್ವಜ್ಞ॥

ಫಲವತ್ತಾದ ಕಪ್ಪು ಮಣ್ಣಿನ ಭೂಮಿಯನ್ನು ಉಳುವವನು ಜಗದ ದೊರೆಯಾದ, ಸರ್ಪವನ್ನು ಕೊರಳಲ್ಲಿ ಆಭರಣವಾಗಿ ಧರಿಸುವ ಶಿವನನ್ನು ಒಲಿಸಿಕೊಂಡಂತೆ ಒಳಿತಾಗುತ್ತದೆ. ಕೃಷಿಯ ಬಗೆಗೆ ಗೌರವವನ್ನು ತೋರುವ ಸರ್ವಜ್ಞನು ರೈತನ ಕೆಲಸವು ದೇವರ ಸೇವೆಯಾಗಿದೆ. ಭೂಮಿಯನ್ನು ಶಿಸ್ತಿನಿಂದ ಉಳುಮೆ ಮಾಡುವ ಶ್ರಮಜೀವಿಗೆ ಆ ದೇವರೂ ಸಹ ಸಂತೃಪ್ತನಾಗಿ ಒಲಿಯುತ್ತಾನೆ. ಶ್ರದ್ಧಾಭಕ್ತಿಯಿಂದ ಕಾಯಕವನ್ನು ನಡೆಸುವುದರಿಂದ ದೇವರನ್ನು ಒಲಿಸಿಕೊಂಡ ಭಾಗ್ಯವು ಲಭಿಸುತ್ತದೆಂಬುದು ಸರ್ವಜ್ಞನ ಅಭಿಪ್ರಾಯವಾಗಿದೆ.

ಕೊಡುವಾತನೇ ಹರನು ಪಡೆವಾತನೇ ನರವು
ಒಡಲ ಒಡವೆಗಳು ಕೆಡೆದು ಹೋಗದ ಮುನ್ನ
ಕೂಡು ಪಾತ್ರವರಿದು ಸರ್ವಜ್ಞ॥

ದಾನದ ಮಹತ್ವವನ್ನು ಈ ಮೇಲಿನ ಸಾಲುಗಳಲ್ಲಿ ತಿಳಿಯಬಹುದು. ದೇವರು ಎಂಬ ಪರಿಕಲ್ಪನೆಯು ಲೌಕಿಕಕ್ಕೆ ಹೊರತಾದುದು, ಪರಲೋಕಕ್ಕೆ ಸಂಬಂಧಿಸಿದ ಸಂಗತಿ ಎಂದು ದೈವತ್ವವನ್ನು, ದೈವೀಗುಣಗಳನ್ನು ಅದ್ಭುತವೆಂದು ಪರಿಭಾವಿಸುವ ಸಾಮಾನ್ಯ ಜನರಿಗೆ ಸರ್ವಜ್ಞನು ನಮ್ಮೊಳಗೇ ಇರುವ ದೈವೀ ಗುಣಗಳನ್ನು ಪರಿಚಯಿಸುತ್ತಾನೆ. ಯಾರು ದಾನ ಮಾಡುತ್ತಾರೋ ಅವರೇ ದೇವರು, ಜಗತ್ತಿನಲ್ಲಿ ಯಾವ ವಸ್ತುವೂ ಯಾರಿಗೂ ಸೀಮಿತವಲ್ಲ. ಎಲ್ಲವೂ ಸಹ ಒಬ್ಬರಿಂದ ಮತ್ತೊಬ್ಬರಿಗೆ ಸೇರಬಹುದಾದದ್ದೇ ಆಗಿರುತ್ತದೆ. ಅರ್ಥಾತ್ ಸರ್ವಜ್ಞನು ಹೇಳಿರುವ ಪ್ರಕಾರವಾಗಿ ಸಂಪತ್ತುಗಳನ್ನು ಹರನಾದ ದೇವರು ನರ ಮನುಷ್ಯರಿಗೆ ನೀಡಿದ್ದಾನೆ. ಅದು ನಶಿಸಿ ಹೋಗುವ ಮುನ್ನ ಮತ್ತೊಬ್ಬರಿಗೆ ಪ್ರಯೋಜನಕ್ಕೆ ಬರುತ್ತದೆ. ಆದುದರಿಂದ ಲೌಕಿಕ ಸಂಪತ್ತೆಂಬುದು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುತ್ತದೆ. ಇದುವೇ ಜಗದ ನಿಯಮ ಎಂಬುದು ಸರ್ವಜ್ಞನ ಅಭಿಮತವಾಗಿದೆ. ಒಡಲ ಒಡವೆಗಳು ಕಳೆದು ಹೋಗುವ ಮುನ್ನ ಎನ್ನುವಾಗ 'ಒಡಲು' ಎಂಬ ಪದವನ್ನು ಸರ್ವಜ್ಞನು ದೇಹಕ್ಕೆ ಸೀಮಿತಗೊಳಿಸಿ, ಆ ದೇಹದ ಒಡವೆಗಳಾದ ಅಂಗಾಂಗಗಳು ನಾಶವಾಗುವ ಮುನ್ನವೇ ಅದು ಇನ್ನೊಬ್ಬರಿಗೆ ಪ್ರಯೋಜನಕ್ಕೆ ಬರುತ್ತದೆ ಎನ್ನುತ್ತಾ ಅಂಗಾಂಗ ದಾನದ ಪರಿಕಲ್ಪನೆಯನ್ನು ಕುರಿತಾಗಿಯೂ ಸಹ ತಿಳಿ ಹೇಳುತ್ತಾನೆ.

ಇದು ವಾಸ್ತವದ ಜಗತ್ತಿನೊಳಗೂ ನೋಡಬಹುದಾದ ವಿಷಯವಾಗಿದೆ. ಎಷ್ಟೋ ಮಂದಿ ತಮ್ಮ ಕಣ್ಣು, ಕಿಡ್ನಿ, ಹೃದಯ, ದೇಹ – ಹೀಗೆ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ದೇಹದಾನವಾದ ದೇಹವನ್ನು ವೈದ್ಯಕೀಯ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಬಳಸಲಾಗುವುದು, ಹೀಗೆ ಅಂದು ಹೇಳಿದ ತತ್ವವು ಇಂದು ಪ್ರಸ್ತುತ ವಿಷಯವಾಗಿ ಕಾರ್ಯಚರಣೆಯಲ್ಲಿದೆ.

ಸತ್ಯಕ್ಕೆ ಸಮಯಿಲ್ಲ ಮಿಥ್ಯಕ್ಕೆ ನೆಲೆಯಿಲ್ಲ
ಹೆತ್ತಮ್ಮನಿಂದ ಹಿತರಿಲ್ಲ ನರರೊಳಗೆ
ನಿತ್ಯರೇ ಇಲ್ಲ ಸರ್ವಜ್ಞ॥

ಇಲ್ಲಿ ಸರ್ವಜ್ಞನು ಸತ್ಯ ಮತ್ತು ಮಿಥ್ಯದ ನಡುವಿನ ವ್ಯತ್ಯಾಸವನ್ನು ಮತ್ತು ತಾಯಿಯ ಮಹತ್ವವನ್ನು ಕುರಿತು ಹೇಳುತ್ತಾನೆ. ಈ ಸುಂದರವಾದ ಜಗತ್ತಿನಲ್ಲಿ ಸತ್ಯವೇ ಶಾಶ್ವತವಾದುದು. ಹೆತ್ತ ತಾಯಿಗಿಂತ ಬೇರೆ ಯಾರೂ ಸಹ ಹಿತ ಬಯಸುವವರಿಲ್ಲ. ಈ ಲೋಕದೊಳಗೆ ಸತ್ಯದ ಮಹತ್ವವನ್ನು ಸರ್ವಜ್ಞ ಹೇಳುತ್ತಾನೆ. ಸತ್ಯ ಮತ್ತು ಸುಳ್ಳಿನ ಘರ್ಷಣೆಯು ಇಂದಿಗೂ ಜೀವಂತವಾಗಿಯೇ ಇದೆ. ಜಗತ್ತಿನಲ್ಲಿ ಸುಳ್ಳು ಸುಖವಾಗಿ ಜೀವನವನ್ನು ನಡೆಸಿದರೂ ಕೊನೆಗೆ ಅದರ ಬಣ್ಣ ಬಯಲಾಗುತ್ತದೆ.

ಜ್ಞಾನಿಗೆ ಮತವಿಲ್ಲ ದೀನಗುಚಿತವಿಲ್ಲ
ಏನು ಇಲ್ಲದವನಿಗೆ ಭಯವಿಲ್ಲ ಐಕ್ಯಂಗೆ
ತಾನೆಂಬುದಿಲ್ಲ ಸರ್ವಜ್ಞ॥

ನಿಜವಾದ ಜ್ಞಾನಿಗೆ ನಿರ್ದಿಷ್ಟವಾದ ಧರ್ಮವೆಂಬುದಿಲ್ಲ. ಅವನು ಎಲ್ಲರನ್ನೂ ಒಂದೇ ಎಂಬುದಾಗಿ ಕಾಣುತ್ತಾನೆ. ಭೇದಭಾವಗಳು ಅಜ್ಞಾನಿಗಳಿಗೆ ಮಾತ್ರ ಸೀಮಿತವಾದುದು. ಸತ್ಯದ ಹಾದಿಯಲ್ಲಿ ನಡೆಯುವ ದೀನನಿಗೆ ಮೇಲು–ಕೀಳು, ಉಚಿತ–

ಅನುಚಿತಗಳ ವ್ಯತ್ಯಾಸವಿರುವುದಿಲ್ಲ. ಲೌಕಿಕದ ವ್ಯಾಮೋಹವನ್ನು ಬಿಟ್ಟವನಿಗೆ ನಾನೇ ಎಂಬ ಅಹಂ ಇರುವುದಿಲ್ಲ. ಇವೆಲ್ಲವೂ ಮನುಷ್ಯನು ಅರಿಯಬೇಕಾದ ಬದುಕಿನ ಶ್ರೇಷ್ಠ ತತ್ತ್ವಗಳು ಎನ್ನಬಹುದು.

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗದೊಡನಾಟ ಬಚ್ಚಲ
ರೊಚ್ಚಿನಂತಿಹುದು ಸರ್ವಜ್ಞ॥

ಈ ತ್ರಿಪದಿಯಲ್ಲಿ ಸರ್ವಜ್ಞನು ಸಜ್ಜನರ ಸಹವಾಸವನ್ನು ಮಾಡಬೇಕೆಂದು ಹೇಳುತ್ತಿದ್ದಾನೆ. ಸಾಮಾನ್ಯವಾಗಿ ಹೇಳುವುದಾದರೆ ಮನುಷ್ಯನು ಸಂಗ ಜೀವಿ. ಸಮಾಜದಲ್ಲಿ ಮನುಷ್ಯ ಬದುಕಲು ಪರಸ್ಪರ ಸ್ಪಂದಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಪರಸ್ಪರ ಮನುಷ್ಯ ಮನುಷ್ಯರ ನಡುವೆ ಉತ್ತಮವಾದ ಸಂಪರ್ಕವಿರಬೇಕಾದದ್ದು ಮುಖ್ಯವಾಗುತ್ತದೆ. ಯಾವುದೇ ವ್ಯಕ್ತಿಯೊಡನೆ ನಾವು ಇರಲು ಇಚ್ಛಿಸುವ ಸಂದರ್ಭದಲ್ಲಿ ಅವರು ಎಷ್ಟು ಉತ್ತಮ ಗುಣ ನಡತೆ ಇರುವವರೆಂದು ಅರಿತು ಮುನ್ನಡೆಯಬೇಕಾಗುತ್ತದೆ. ಉತ್ತಮರ ಸಂಗವನ್ನು ಮಾಡಿದರೆ ನಾವೂ ಸಹ ಉತ್ತಮರಾಗಿಯೇ ಬದಲಾಗುತ್ತೇವೆ. ಆದರೆ ದುರ್ಜನರ ಸಂಗ ಸೇರಿದರೆ ಕೆಟ್ಟ ಗುಣ ಸ್ವಭಾವವನ್ನು ಬೆಳಸಿಕೊಳ್ಳುತ್ತಾರೆ.

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ॥

ಈ ಮೇಲಿನ ಸಾಲುಗಳು ಸರ್ವಜ್ಞನಿಗೆ ನಾಡಿನ ಮೇಲಿರುವ ಅಭಿಮಾನ ಮತ್ತು ತನ್ನ ನಾಡಿನ ಜನರ ಮೇಲಿರುವ ಪ್ರೀತಿಯನ್ನು ಕುರಿತು ವಿವರಿಸುತ್ತದೆ. ಸರ್ವಜ್ಞನು ಮಾನವತೆಯನ್ನು ಸಾರುವ ವಚನಕಾರನಾಗಿದ್ದಾನೆ. ಈ ಜಗತ್ತಿನಲ್ಲಿ ಮೇಲು–ಕೀಳು ಎಂಬುದಿಲ್ಲ. ಪ್ರಕೃತಿಯು ಹೇಗೆ ಎಲ್ಲವನ್ನೂ ಒಳಗೊಳ್ಳುತ್ತದೆಯೋ ಹಾಗೆಯೇ ಮನುಷ್ಯರೂ ಸಹ ವರ್ತಿಸಬೇಕು. ಉತ್ತಮವಾದ ಕುಲವನ್ನೆವುದು ನಡತೆಯಿಂದ ಕಾಣಬೇಕೇ ವಿನಾಃ ಹುಟ್ಟಿನಿಂದಲ್ಲ. ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಅನೇಕ ಸಮಾಜ ಸುಧಾರಕರು ಶ್ರಮಿಸಿದ್ದಾರೆ. ಸುಡುವ ಅಗ್ನಿಯು ಯಾವ ತಾರತಮ್ಯವನ್ನೂ ಮಾಡದೇ ಇಡೀ ಲೋಕವನ್ನೇ ಆವರಿಸುತ್ತದೆ. ಪ್ರಕೃತಿಯಲ್ಲಿಲ್ಲದ ಮೇಲು–ಕೀಳನ್ನು ಮನುಜನು ಕೃತಕವಾಗಿ ಸೃಷ್ಟಿಸಿಕೊಂಡಿದ್ದಾನೆ. ಈ ಕೆಟ್ಟ ನಡವಳಿಕೆಯನ್ನು ತೊರೆಯಬೇಕೆಂಬುದೇ ಸರ್ವಜ್ಞನ ಅಭಿಪ್ರಾಯವಾಗಿದೆ.

ಒಟ್ಟಾರೆ ಯಾವುದೇ ವಿಷಯವನ್ನೂ ಸಹ ಅತ್ಯಂತ ಸರಳವಾಗಿ ಮನ ಮುಟ್ಟುವಂತೆ ಹೇಳುವುದು ಸರ್ವಜ್ಞನ ರೀತಿಯಾಗಿದೆ. ಸರ್ವಜ್ಞನ ವಚನಗಳು ಓದಿದವನ ಮೇಲೂ ಮತ್ತು ಅದನ್ನು ಕೇಳದವನಿಗೂ ಅಗಾಧವಾದ ಪ್ರಭಾವವನ್ನು ಬಿರುತ್ತವೆ.

ಪರಾಮರ್ಶಿಸಿದ ಕೃತಿಗಳು :

೧. ಸರ್ವಜ್ಞನ ವಚನಗಳು : (ಸಂ) ಡಾ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, ೨೦೦೨
೨. ಸರ್ವಜ್ಞ ಕವಿ :(ಸಂ) ಅ.ನ.ಕೃಷ್ಣರಾಯ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨
೩. ಸರ್ವಜ್ಞ ಸಮಗ್ರ ತ್ರಿಪದಿಗಳು :(ಸಂ) ಡಾ. ರಾಗೌ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩